**ಸಾಕ್ಷಿಗೆ ದಿನಾಂಕ:10-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ.GNC ವಕೀಲರಿಂದ ::**

ವಾದಿಗಳ ವಂಶಸ್ಥರು ಹಾಗೂ ನಮ್ಮ ವಂಶಸ್ಥರು ಬೇರೆ ಬೇರೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ಮೂಲತಃ ಗಿರಿಯಪ್ಪ ಬಿನ್ ಹರಿಯಪ್ಪ ರವರ ಹೆಸರಿನಲ್ಲಿ ಇತ್ತು. ಸದರಿ ಗಿರಿಯಪ್ಪ ರವರಿಗೆ ದಾವಾ ಶೆಡ್ಯೂಲ್ ಸ್ವತ್ತು ಯಾವ ಮೂಲದಿಂದ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾವಿತ್ರಮ್ಮ ರವರು ನನಗೆ ಗೊತ್ತಿರುತ್ತಾರೆ. ಸಾವಿತ್ರಮ್ಮ ರವರ ಗಂಡನ ಹೆಸರು ತೋಟಪ್ಪ ಆಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತು ಮೂಲತಃ ಬಸಪ್ಪ ರವರ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ಬಸಪ್ಪ ರವರು ವಾದಿಯ ಕುಟುಂಬಕ್ಕೆ ಸೇರಿದ ವ್ಯಕ್ತಿ ಆಗಿರುತ್ತಾರೆ ಎಂದರೆ ಸರಿ. ಬಸಪ್ಪ ರವರು ಮೃತರಾದ ನಂತರದಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಮಲ್ಲಮ್ಮ ರವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ನಂತರದಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಸಾವಿತ್ರಮ್ಮ ರವರ ಹೆಸರಿಗೆ ಹೋಗಿರುತ್ತದೆ ಎಂದರೆ ಸರಿ. ಬಸಪ್ಪ ಮತ್ತು ಮಲ್ಲಮ್ಮ ರವರ ಒಬ್ಬಳೇ ಮಗಳು ಸದರಿ ಸಾವಿತ್ರಮ್ಮ ಆಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಸಾವಿತ್ರಮ್ಮ ಬಸಪ್ಪ ರವರ 2 ನೇ ಹೆಂಡತಿಯ ಮಗಳಾಗಿರುತ್ತಾರೆ ಎಂದು ನುಡಿಯುತ್ತಾರೆ. ಸಾವಿತ್ರಮ್ಮ ರವರ ಹೆಸರಿನಲ್ಲಿ ಇದ್ದ ಸ್ವತ್ತು ಅವರು ತೀರಿಕೊಂಡ ನಂತರ ಯಾರ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರ ಹೆಸರಿನಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಯಾವತ್ತು ಸಹ ಇರಲಿಲ್ಲ ಮತ್ತು ನನ್ನ ಮಾವ ಕೆ ಎನ್ ಗಂಗಾಧರಪ್ಪ ರವರ ಹೆಸರಿನಲ್ಲಿ ಇತ್ತು ಎಂದು ನುಡಿದಿರುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಹಿಂದೆ ಸಾವಿತ್ರಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರ ಹೆಸರಿನಿಂದ ನಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಲು ನಾನು ಎ ಸಿ ರವರ ಸಮಕ್ಷಮ ಅರ್ಜಿ ಸಲ್ಲಿಸಿರುತ್ತೇವೆ. ಸದರಿ

ಸಮಯದಲ್ಲಿ ವಾದಿಯರು ಅಥವಾ ಅವರ ಕುಟುಂಬದವರನ್ನು ಆ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಸ್ವತ್ತು ಮೂಲತಃ ಸಾವಿತ್ರಮ್ಮ ರವರಿಗೆ ಸೇರಿದ ಸ್ವತ್ತಾಗಿದ್ದು ಅದರ ಖಾತೆಯನ್ನು ನಾವು ವಾದಿಗಳ ಗಮನಕ್ಕೆ ಬಾರದೇ ನಮ್ಮ ಹೆಸರಿಗೆ ಸುಳ್ಳಾಗಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾವಿತ್ರಮ್ಮ ರವರ ಹೆಸರಿನಲ್ಲಿ ಎಂ ಆರ್ 11/1993-94 ರಂತೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಇದ್ದ ವಿಚಾರ ನನಗೆ ತಿಳಿದಿರುತ್ತದೆಯೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಗಂಡ ಸೇನೆಯಲ್ಲಿ ಇದ್ದ ಕಾರಣ ನಮಗೆ ಆ ವಿಚಾರದ ಬಗ್ಗೆ ತಿಳಿದಿರಲಿಲ್ಲ ಮತ್ತು ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ನಮ್ಮ ಮಾವನ ಹೆಸರಿನಲ್ಲಿ ಆಗಿನಿಂದ ಇತ್ತು ಎಂದು ನುಡಿದಿರುತ್ತಾರೆ. ಎಂ ಆರ್ 11/1993-94 ರಂತೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಸಾವಿತ್ರಮ್ಮ ರವರ ಹೆಸರಿನಲ್ಲಿ ಇದ್ದ ಕಾರಣ ಅವರ ಪೌತಿ ನಂತರ ಕಾನೂನಿನ ರೀತ್ಯಾ ವಾದಿಗಳು ಸೇರಿದಂತೆ ಅವರ ಕುಟುಂಬದವರ ಹೆಸರಿಗೆ ಖಾತೆ ಬದಲಾವಣೆ ಆಗಬೇಕಿತ್ತು ಎಂದರೆ ಸರಿಯಲ್ಲ. ವಾದಿಗಳ ಕುಟುಂದವರಿಗೆ ತಿಳಿಸದೇ ಮೋಸದಿಂದ ನಮ್ಮ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಗಂಗಾದರಪ್ಪ ರವರ ಹೆಸರಿನಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಚೆಕ್ಕುಬಂದಿ- ಪೂರ್ವಕ್ಕೆಃ ಪಶ್ಚಿಮಕ್ಕೆಃ ಉತ್ತರಕ್ಕೆಃ ದಕ್ಷಿಣಕ್ಕೆಃಲಾದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಹೂಡುವ ಸಮಯದಲ್ಲಿ ದಾವಾ

 

ಶೆಡ್ಯೂಲ್ ಸ್ವತ್ತನ್ನು ನಾವು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಈಗಲೂ ಸಹ ನನ್ನ ಹೆಸರಿನಲ್ಲಿ ಇರುತ್ತದೆ. 3 ನೇ ಪ್ರತಿವಾದಿಯ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಬದಲಾವಣೆ ಆಗಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ದಾವಾ ಶೆಡ್ಯೂಲ್ ಸ್ವತ್ತು ಮಾರಾಟ ಆಗಿರುವ ವಿಚಾರ ತಿಳಿಸಿರುವುದಿಲ್ಲ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನ ವಾದಿಗಳ ಜೊತೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವಾಧೀನಕ್ಕೆ ನಾನು ಅಡ್ಡಿಪಡಿಸಿದ ಕಾರಣ ವಾದಿಗಳು ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಬಗ್ಗೆ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೆ ದಾವಾ ಶೆಡ್ಯೂಲ್ ಸ್ವತ್ತು ಸೇರದಿದ್ದರೂ ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ಸುಳ್ಳು ದಾಖಲೆಯನ್ನು ಸೃಷ್ಟಿಸಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ. ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: